# ಕಡಿಮೆ ಹೊಗೆ ಬರುವ ಒಲೆ



ಕಡಿಮೆ ಹೊಗೆಯ ಒಲೆ



ಕಡಿಮೆ ಹೊಗೆಯ ಒಲೆ ತಯಾರಿಸಿರುವ ತುಮಕೂರಿನ ಶೈಲಜಾ ವಿಟ್ಠಲ್

ಕಸಕಡ್ಡಿಗಳನ್ನೇ ಬಳಸಬಹುದಾದ ಪರಿಸರಸ್ನೇಹಿ ಒಲೆಯನ್ನು ತಯಾರಿಸುವ ತುಮಕೂರಿನ ಧರ್ಮಾ ಟೆಕ್ನಾಲಜೀಸ್‌ನ ಶೈಲಜಾ ವಿಟ್ಠಲ್, ತೆಂಗಿನ ಕರಟ, ತೆಂಗಿನ ಚಿಪ್ಪು, ಅಥವಾ ನಾರುಗಳಷ್ಟೇ ಉರಿಸಲು ಸಾಕು ಎನ್ನುತ್ತಾರೆ. ಸೌದೆಗಳು ಇದಕ್ಕೆ ಬೇಕಾಗಿಯೇ ಇಲ್ಲ, ಇದರಿಂದ ಸ್ನಾನಕ್ಕೆ ನೀರು ಕಾಯಿಸಬಹುದು. ಅಡುಗೆಯನ್ನು ತಯಾರಿಸಬಹುದು.

ನಾಲ್ಕು ಕರಟಗಳಿಗೆ ಒಂದು ಪಾವು ಅಕ್ಕಿ ಅನ್ನ ಆಗುತ್ತದೆ. ಎಲ್ಲ ತರಹದ ಅಡುಗೆಯನ್ನೂ ಇದರಲ್ಲಿ ಮಾಡಬಹುದು. ಮನೆಯೊಳಗೆ ಶಾಖ ಜಾಸ್ತಿ ಶೇಖರಣೆಯಾಗುವುದರಿಂದ ಮನೆಯ ಹೊರಗಡೆ, ಮಹಡಿ ಮೇಲೆ ಇದನ್ನು ಇಡಬಹುದು. ನಗರ ಪ್ರದೇಶಗಳಿಗೂ ಇದು ಹೊಂದಿಕೆಯಾಗುತ್ತದೆ, ಈ ಸ್ಟೌಗೆ ಹೊರಗಡೆ ಒಂದು ಪುಟಾಣಿ ಫ್ಯಾನ್ ಅಳವಡಿಸಿದ್ದೇವೆ. ಇದರಿಂದ ಹೊಗೆಯೂ ಕಡಿಮೆಯಾಗುತ್ತದೆ. ಮನೆಯಂಗಳದಲ್ಲಿ ಬಿದ್ದ ತೆಂಗಿನ ಗರಿಯ ಕಡ್ಡಿಗಳು, ವಿವಿಧ ಮರಗಳ ಕಡ್ಡಿಗಳನ್ನು ಬಿಸಾಕುವ ಬದಲಿಗೆ ಎಲ್ಲವನ್ನೂ ಸೇರಿಸಿ ಈ ಒಲೆಗೆ ಹಾಕಿ ಬಿಸಿ ನೀರು ಕಾಯಿಸಬಹುದು. ಇದರಿಂದ ಉಳಿದ ಬೂದಿಯನ್ನು ಗಿಡಗಳಿಗೆ ಬಳಸುವುದರಿಂದ ಗಿಡಗಳೂ ಸೊಂಪಾಗಿ ಬೆಳೆಯುತ್ತವೆ. ನಮ್ಮನೆಯಲ್ಲಿ ಇವತ್ತಿಗೂ ನಾವು ವಾರಕ್ಕೊಮ್ಮೆಯಾದರೂ ಈ ಸ್ಟೌನಲ್ಲಿ ನೀರು ಕಾಯಿಸಿ ತಲೆ ಸ್ನಾನ ಮಾಡುತ್ತೇವೆ. ಇದರಿಂದ ಕೂದಲೂ ಚೆನ್ನಾಗಿರುತ್ತದೆ. ಕರೆಂಟ್ ಹೀಟರ್‌ನಿಂದ ಕಾಯಿಸಿದ ನೀರು ಕೂದಲಿಗೆ ಒಳ್ಳೆಯದಲ್ಲ. ಇದರಿಂದ ನಮಗೆ ಗ್ಯಾಸ್ ಸಿಲಿಂಡರ್ ಕಡಿಮೆ ಸಾಕಾಗುತ್ತದೆ ಎನ್ನುತ್ತಾರೆ ಶೈಲಜಾ.

ಅಳವಡಿಸಿಕೊಂಡರು. ಗೋಬರ್ ಗ್ಯಾಸ್ ಈಗ ಕೆಲವೇ ವರ್ಷಗಳ ಹಿಂದೆ ಹಳ್ಳಿಗಳಲ್ಲಿ ಯಾರ ಮನೆಯಲ್ಲಿ ನೋಡಿದರೂ ಇದ್ದೇ ಇರುತ್ತಿತ್ತು. ಅಡುಗೆಗೆ, ಹಾಲು ಕಾಯಿಸಲು, ಟೀ ಕಾಫಿ ಮಾಡಲು ಬಹು ದೊಡ್ಡ ಪ್ರಮಾಣದಲ್ಲಿ ಇದು ಬಳಕೆಯಾಗುತ್ತಿತ್ತು.

ಈಗಾಗಲೇ ಹಲವು ದಶಕಗಳಿಂದ ಇತರ ರಾಜ್ಯಗಳಾದ ಪಂಜಾಬ್, ರಾಜಸ್ಥಾನಗಳ ಹಳ್ಳಿಗಳು ಎಲ್‌ಪಿಜಿಗೆ ಬದಲಾಗಿ ಗೋಬರ್ ಗ್ಯಾಸ್‌ಗಳನ್ನೇ ಬಳಸುತ್ತಿವೆ. ಮಹಾರಾಷ್ಟ್ರದ ಸಿಂಧೂದುರ್ಗದ ನಿವಾಜೆ ಎಂಬ ಹಳ್ಳಿಯು ಸ್ವಯಂ ಸೇವಾ ಸಂಸ್ಥೆಯೊಂದರ ಪ್ರಯತ್ನದ ಫಲವಾಗಿ ಅಲ್ಲಿನ 350 ಮನೆಗಳೂ ಗೋಬರ್ ಗ್ಯಾಸನ್ನೇ ಬಳಸುತ್ತಿವೆ. ಈ ಮೂಲಕ ಮಹಾರಾಷ್ಟ್ರದ ಮೊದಲ ಕಾರ್ಬನ್ ರಹಿತ ಹಳ್ಳಿ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ.

ಹೀಗೆ ಗೋಬರ್ ಗ್ಯಾಸ್ ಜನಪ್ರಿಯವಾಗಿರುವ ಹೊತ್ತಲ್ಲೇ ಸಬ್ಸಿಡಿಯಲ್ಲಿ ಸಿಲಿಂಡರ್ ಕೊಡಲಾಯಿತು. ನಗರಗಳಲ್ಲಿ ಮಾತ್ರ ಇದ್ದಂತಹ ಎಲ್‌ಪಿಜಿ ಸಿಲಿಂಡರ್‌ಗಳು ಹಳ್ಳಿಹಳ್ಳಿಗಳಲ್ಲೂ ಅಡುಗೆ ಮನೆಗಳನ್ನು ಹೊಕ್ಕಿತು. ಈಗ ಅದಿಲ್ಲದೇ ಅಡುಗೆಯೇ ಇಲ್ಲವೆಂಬಂತಾಗಿದೆ. ಆದರೆ ಈಗ ಸಿಲಿಂಡರ್‌ನ ಅಭಾವದ ಸಮಸ್ಯೆ ಹಳ್ಳಿಗಳಿಗೂ ವ್ಯಾಪಿಸಿದೆ.

ಸಿಲಿಂಡರ್ ಸಮಸ್ಯೆ ಹಳ್ಳಿಗಳ ಕಡೆ ಸ್ವಲ್ಪ ಮಟ್ಟಿಗೆ ಆಗಿರುವುದು ನಿಜ. ಮೊದಲೆಲ್ಲ ಹತ್ತು ಹದಿನೈದು ದಿವಸಗಳಿಗೆ ಸಿಗುತ್ತಿದ್ದ ಸಿಲಿಂಡರ್ ಈಗ ಒಂದೂವರೆ ತಿಂಗಳವರೆಗೆ ಕಾಯಬೇಕಾದ ಅನಿವಾರ್ಯತೆ ಇದೆ. ಆದರೆ ಯಾರ ಮನೆಯಲ್ಲಿ ಕೊಟ್ಟಿಗೆ ಇದೆಯೋ ಅವರಿಗೆಲ್ಲ ಅಷ್ಟೊಂದು ಸಮಸ್ಯೆಯಾಗಿಲ್ಲ. ಯಾಕೆಂದರೆ ಕೊಟ್ಟಿಗೆ ಇರುವ ಮನೆಯಲ್ಲೆಲ್ಲ ಯಾರೂ ಗೋಬರ್ ಗ್ಯಾಸ್ ಅನ್ನು ತ್ಯಜಿಸಿಲ್ಲ. ಗೋಬರ್ ಗ್ಯಾಸ್‌ಗಾಗಿ ಇದ್ದ ಪ್ಲಾಂಟ್, ಒಲೆಗಳನ್ನು ಹಾಗೇ ಉಳಿಸಿಕೊಂಡಿದ್ದಾರೆ. ಹಾಗಾಗಿ ಒಂದೊಮ್ಮೆ ಸಿಲಿಂಡರ್ ಒಂದೆರಡು ತಿಂಗಳು ಸಿಗಲಿಲ್ಲವೆಂದರೂ ಅಷ್ಟು ಸಮಸ್ಯೆಯಾಗುವುದಿಲ್ಲ.

‘ಅವಿಭಕ್ತ ಕುಟುಂಬವಾದ ನಮ್ಮ ಮನೆಯಲ್ಲಿ ಜನ ಜಾಸ್ತಿ, ಹಾಗಾಗಿ ಸಿಲಿಂಡರ್ ಒಂದೇ ನಮಗೆ ಸಾಕಾಗುತ್ತಿರಲಿಲ್ಲ. ಸೌದೆ ಒಲೆ, ಗೋಬರ್ ಗ್ಯಾಸ್ ಮತ್ತು ಸಿಲಿಂಡರ್ ಮೂರನ್ನೂ ಬಳಸುತ್ತಿದ್ದೆವು, ಈಗ ಸಿಲಿಂಡರ್ ಸಮಸ್ಯೆಯಾಗಿರುವುದು ನಮಗೆ ಅಷ್ಟೊಂದು ಬಾಧಿಸುತ್ತಿಲ್ಲ’ ಎನ್ನುತ್ತಾರೆ ಉತ್ತರ ಕನ್ನಡ ಜಿಲ್ಲೆಯ ಜೋಗಿನ ಮನೆಯ ಪ್ರಭಾವತಿ ಹೆಗಡೆ. ಒಂದೆರಡು ಅಥವಾ ನಾಲ್ಕೈದು ತಿಂಗಳು ಸಿಲಿಂಡರ್ ಬರದಿದ್ದರೂ ಇಂಥವರ ಮನೆಗೆ ಅಷ್ಟೊಂದು ಸಮಸ್ಯೆಯಾಗುವುದಿಲ್ಲ.

ನಿಜ, ಹಳ್ಳಿಗಳ ಕಡೆ ಕೊಟ್ಟಿಗೆ ಇರುವವರ ಮನೆಗಳಲ್ಲಿ ಅಷ್ಟೊಂದು ಸಮಸ್ಯೆಯಾಗಿಲ್ಲ. ಆದರೆ ಇನ್ನಿತರ ಮನೆಗಳಿಗೆ ತೊಂದರೆಯಾಗುವುದಕ್ಕೆ ಬಹುಮುಖ್ಯ ಕಾರಣ ಅವರ ಮನೆಯಲ್ಲಿ ಕೊಟ್ಟಿಗೆ ಇಲ್ಲದಿರುವುದು. ಹಳ್ಳಿಗಳಲ್ಲಿ ಇಂದು ಅನೇಕರು ಹಸು, ಎಮ್ಮೆ ಸಾಕುವುದನ್ನು ಕೈ ಬಿಟ್ಟಿದ್ದಾರೆ, ಇದರಿಂದ ಅವರಿಗೆ ಗೊಬ್ಬರದ ಸಮಸ್ಯೆಯಾಗುತ್ತಿದೆ. ಹಾಗಾಗಿ ಗೋಬರ್ ಗ್ಯಾಸ್ ಅನ್ನು ಮೊದಲು ಬಳಸುತ್ತಿದ್ದವರೂ ಇಂದು ಅದನ್ನು ತ್ಯಜಿಸಿದ್ದಾರೆ, ಹೇಗೂ ಸಿಲಿಂಡರ್ ಸಿಗುತ್ತಿದೆಯಲ್ಲ ಎಂಬ ಆತ್ಮವಿಶ್ವಾಸ ಅವರಲ್ಲಿ. ಆದರೆ ಜಾಗತಿಕ ವಿದ್ಯಮಾನ ನೋಡಿದರೆ, ಹಾರ್ಮುಜ್ ಜಲಸಂಧಿಯ ಮೇಲಿನ ದಾಳಿ ನೋಡಿದರೆ ಇದು ಶಾಶ್ವತವಾಗಿಯೇ ನಮಗೆ ಸಿಲಿಂಡರ್ ಕೊರತೆಯಾಗುವ ಎಲ್ಲ ಲಕ್ಷಣಗಳೂ ಕಾಣಿಸುತ್ತಿವೆ. ಹಾಗೇನಾದರೂ ಆದರೆ ಆಗಿನ ಕಾಲದ ಕಟ್ಟಿಗೆ, ಕೆಂಡ, ಗೋಬರ್ ಗ್ಯಾಸ್‌ಗೆ ಹೋಗುವುದು ಅನಿವಾರ್ಯವಾಗಬಹುದು.



ಬಹುತೇಕ ಹಳ್ಳಿಗಳಲ್ಲಿ ಬಚ್ಚಲ ಒಲೆಗೆ ಕಟ್ಟಿಗೆಯನ್ನೇ ಬಳಸುವವರಿದ್ದಾರೆ. ಹಳ್ಳಿಗಳಲ್ಲಿ ಸೋಲಾರ್ ವಾಟರ್ ಹೀಟರ್ ಅಷ್ಟೊಂದು ಜನಪ್ರಿಯವಾಗಿಲ್ಲ. ನಗರಗಳಲ್ಲಿ ಅನೇಕ ಮನೆಗಳಲ್ಲಿ ಸೋಲಾರ್ ಇರುವ ಕಾರಣಕ್ಕೆ ಸ್ನಾನಕ್ಕೆ ಸಮಸ್ಯೆಯಾಗುವುದಿಲ್ಲ. ಇನ್ನು ಕೆಲವರು ಎಲೆಕ್ಟ್ರಿಕ್ ಹೀಟರ್ ಇಟ್ಟುಕೊಂಡಿರುತ್ತಾರೆ. ಆದರೆ ಅಡುಗೆಗೂ, ಸ್ನಾನಕ್ಕೂ ಗ್ಯಾಸ್ ಸಿಲಿಂಡರ್ ಅನ್ನೇ ನಂಬಿಕೊಂಡಿರುವವರಿಗೆ ಮಾತ್ರ ನಿಜಕ್ಕೂ ತೊಂದರೆ.